# ಶ್ರೀಶ್ರೀಶ್ರೀ 1008ಶ್ರೀವಿದ್ಯಾಸಂಪೂರ್ಣತೀರ್ಥ ಶ್ರೀಪಾದಂಗಳವರಚರಿತ್ರೆ

**(ಕ್ರೀ.ಶ.1866–1888)**

**ವಿದ್ಯಾಂಬುಧೌ ನಿಮಜ್ಜಂತಂ ಸದ್ವಿದ್ಯಾಪಾರಗಂ ಮುನಿಮ್।**
**ವಿದ್ಯಾಭಿವೃದ್ಧಿಸಿದ್ಧ್ಯರ್ಥಂ ಭಕ್ತಾಭೀಷ್ಟಫಲಪ್ರದಮ್॥**
**ಜ್ಞಾನಭಕ್ತಿಸಮೃದ್ಧಂ ತಂ ಸಜ್ಜನೋದ್ಧಾರಕಂ ಸದಾ।**
**ವಿದ್ಯಾಸಂಪೂರ್ಣತೀರ್ಥಾರ್ಯಂ ಸದ್ಗುರುಂ ಪ್ರಣಮಾಮ್ಯಹಮ್॥**

ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳಿಗೆ ನಾಲ್ಕು ವೇದಗಳೇ ಪ್ರಧಾನ. ವೇದ ರಾಶಿಯನ್ನು ಋಗ್, ಯಜುರ್, ಸಾಮ ಹಾಗೂ ಅಥರ್ವಣವೇದಗಳೆಂದು ವಿಂಗಡನೆಯಾಗಿದೆ.

ಅದರಲ್ಲಿ ಯಜುರ್ವೇದದಲ್ಲಿ ಎರಡು ಭಾಗ ಶುಕ್ಲಯಜುರ್ವೇದ ಹಾಗೂ ಕೃಷ್ಣ ಯಜುರ್ವೇದ. ಶುಕ್ಲಯಜುರ್ವೇದದ ಮಠವೇ ಕಣ್ವಮಠ. ಕ್ರಿ.ಶ. 13 ನೇ ಶತಮಾನದಲ್ಲಿ ಶ್ರೀಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಸ್ಥಾಪನೆಮಾಡಿ, ಉಡುಪಿಯಲ್ಲಿ ಶ್ರೀಕೃಷ್ಣನ ಸುಂದರ ಮೂರ್ತಿಯನ್ನು ಸ್ಥಾಪನೆಮಾಡಿ ಅಷ್ಟಮಠಗಳನ್ನು ಸ್ಥಾಪಿಸಿದರು. ಈ ಮಠ ಪರಂಪರೆಯಲ್ಲಿ ಬರುವ ಶಿರೂರು ಮಠದ ಶ್ರೀಲಕ್ಷ್ಮೀಮನೋಹರತೀರ್ಥರು ಕ್ರಿ.ಶ. 1796 ರಲ್ಲಿ [ನಳನಾಮ ಸಂವತ್ಸರದ ಮಾಘಶುದ್ಧ ಪಂಚಮಿ ಶ್ರೀಕಣ್ವ ಜಯಂತಿಯಂದು] ಶ್ರೀವೆಂಕಟೇಶಾಚಾರ್ಯರಿಗೆ ಸನ್ಯಾಸ ದೀಕ್ಷೆ ಕೊಟ್ಟು 'ಶ್ರೀಮಾಧವತೀರ್ಥ' ಎಂಬ ನಾಮಾಭಿದಾನದಿಂದ 'ಕಣ್ವಮಠ ಸ್ಥಾಪನೆ' ಮಾಡಿದರು.

ಈ ಕಣ್ವಮಠ ಪರಂಪರೆಯಲ್ಲಿ 12 ಯತಿಗಳು ಪೀಠಾರೋಹಣ ಮಾಡಿದ್ದಾರೆ. ಅವರಲ್ಲಿ ಐದನೇ ಯತಿಗಳಾಗಿ ಶ್ರೀಶ್ರೀವಿದ್ಯಾಸಂಪೂರ್ಣತೀರ್ಥರು 20 ವರ್ಷ [ಕ್ರಿ.ಶ. 1888–1919] ಕಾಲ ಪೀಠದಲ್ಲಿ ವಿರಾಜಮಾನರಾಗಿ ವೇದಾಂತ ಸಾಮ್ರಾಜ್ಯವನ್ನು ಆಳಿದ್ದಾರೆ. ಹೆಸರಿಗೆ ತಕ್ಕಂತೆ ಇವರು ವಿದ್ಯಾಸಂಪೂರ್ಣರೇ. ಅದಕ್ಕೆಂದೇ ಇವರ ವೃಂದಾವನದ ಸನ್ನಿಧಿಯಲ್ಲಿ ಚಿಕ್ಕಮಕ್ಕಳಿಗೆ ಅಕ್ಷರಾಭ್ಯಾಸ ಪ್ರಾರಂಭ ಮಾಡಿಸುವ ಪರಿಪಾಠವಿದೆ. ಇವರು 'ರತ್ನಪಂಚಕ' ವೆಂಬ ವಿದ್ವತ್ಪೂರ್ಣ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಶ್ರೀಮಾಧವತೀರ್ಥಾದಿ ಗುರುಪರಂಪರಾಗತ ಕಾಲನಿರ್ಣಯ ಪೂರ್ವಕ ಸ್ತೋತ್ರವೂ ಇದೆ. ಇದಲ್ಲದೆ ಶ್ರೀಕಣ್ವಮಠವು ಅಧಿಕೃತ ಮಠವೆಂದು ಮುಂಬಯಿ ಹಾಗೂ ಮೈಸೂರು ಸರಕಾರಗಳಿಂದ ಹುಕುಮು ಮಾಡಿಸಿದ್ದು ಇವರ ಸಾಧನೆಗಳಲ್ಲಿ ಒಂದು. ಕ್ರಿ.ಶ. 1919 ರಲ್ಲಿ ಕವಿತಾಳದ ಶ್ರೀಶ್ರೀನಿವಾಸಾಚಾರ್ಯರಿಗೆ ಮಠದ ಜವಾಬ್ದಾರಿ ಕೊಟ್ಟು ಗೊರಲೂಟಿಯಲ್ಲಿ ವೃಂದಾವನಸ್ಥರಾದರು.

ಇವರ ಪೂರ್ವಾಶ್ರಮದ ಹೆಸರು ಕನಕಗಿರಿ ಹನುಮಂತಾಚಾರ್ಯ. ತಂದೆ ಕನಕಗಿರಿ ಗುರುರಾಜಾಚಾರ್ಯರು. ಕಾಶ್ಯಪ ಗೋತ್ರೋತ್ಪನ್ನರು. ಇವರ ಊರು

ಯಾದಗಿರಿ ಜಿಲ್ಲೆಯ ಸುರಪುರ. ತಂದೆ ಗುರುರಾಜಾಚಾರ್ಯರು ಮಹಾಧರ್ಮಿಷ್ಠರು, ಸದಾಚಾರ ಸಂಪನ್ನರು. ಸಂಸ್ಕೃತ ಪಂಡಿತರು. ವೈದಿಕವಿದ್ಯೆಯಲ್ಲಿ ಪಾರಂಗತರು. ಗುರುರಾಜಾಚಾರ್ಯರ ಧರ್ಮಪತ್ನಿಯಾದರೂ ಒಳ್ಳೆ ಸುಶೀಲಳೂ, ಧರ್ಮಪರಾಯಣಳೂ, ಪತಿಯ ಮನೋವೃತ್ತಿಯನ್ನು ಅನುಸರಿಸಿ ನಡೆಯುವವಳೂ ಆಗಿದ್ದಳು. ಒಂದು ದಿನ ಗುರುರಾಜಾಚಾರ್ಯರು ವಿಜಯಪುರ ಜಿಲ್ಲೆಯ ಶೆಲ್ಲಿಕೇರಿ ಎಂಬ ಗ್ರಾಮಕ್ಕೆ ಹೋಗಿದ್ದಾಗ ಹಳ್ಳದಲ್ಲಿ ಮುಖಮಾರ್ಜನೆ ಮಾಡಲು ವರ್ತಿಯನ್ನು ತೆಗೆಯಲು ತೊಡಗಿದಾಗ ಅಲ್ಲಿ ಅವರಿಗೆ ಚಿಕ್ಕ ಆಂಜನೇಯ ಮೂರ್ತಿಯೊಂದು ದೊರೆತು ಅದನ್ನು ನಿತ್ಯವೂ ಪೂಜಿಸಬೇಕೆಂಬ ದೃಷ್ಟಾಂತವಾಯಿತು. ಮೊದಲಿನಿಂದಲೂ ದಾನ-ಧರ್ಮ ಪರೋಪಕಾರ ಕೆಲಸಗಳಿಂದ ಹೆಸರುವಾಸಿಯಾಗಿದ್ದ ಗುರುರಾಜಾಚಾರ್ಯರ ಕೀರ್ತಿ ಈಗ ಮತ್ತಷ್ಟು ಹೆಚ್ಚಾಯಿತು. ಇವರಿಗೆ ತಕ್ಕಂತೆ ಹನುಮಂತಾಚಾರ್ಯ, ತಿಮಣಾಚಾರ್ಯ, ರಾಮಾಚಾರ್ಯ, ಶ್ರೀನಿವಾಸಾಚಾರ್ಯ, ಕೃಷ್ಣಾಚಾರ್ಯ ಎಂಬ ಐದು ಜನ ಪುತ್ರರತ್ನರು ಇದ್ದರು. ಇವರಲ್ಲಿ ಜೇಷ್ಠಪುತ್ರರಾದ ಹನುಮಂತಾಚಾರ್ಯರೇ ಕಣ್ವಮಠದ ಪೀಠವನ್ನು ಅಲಂಕರಿಸಿದವರು.

ಕಣ್ವಮಠದ ನಾಲ್ಕನೇ ಯತಿಗಳಾದ ಶ್ರೀ ವಿದ್ಯಾನಿಧಿತೀರ್ಥರು ಕ್ರಿ.ಶ. 1866 ರಲ್ಲಿ ಶ್ರೀವಿಠಲಕೃಷ್ಣನ ಪೂಜೆಯಲ್ಲಿ ನಿರತರಾಗಿದ್ದಾಗ ಪೂಜೆಯ ಕೊನೆಗೆ ಮಹಾಮಂಗಳಾರತಿ ಸಮಯದಲ್ಲಿ ಭಗವಂತನಿಗೆ ಸಮರ್ಪಿಸಿದ ತುಳಸಿಹಾರ ಬಲಗಡೆ ಪ್ರಸಾದವಾಗಿ ವರವನ್ನು ಕೊಟ್ಟಾಗ ಶ್ರೀಪಾದಂಗಳವರಿಗೆ ಸಂದೇಹ ಉಂಟಾಯಿತು. ಅದೇದಿನ ರಾತ್ರಿ ತೊಟ್ಟಿಲು ಸೇವೆಯ ಸಮಯದಲ್ಲಿಯೂ ಮಹಾಮಂಗಳಾರತಿ ನಡೆದಾಗ ಮತ್ತೇ ಹೂ ಪ್ರಸಾದ ದೊರೆತಾಗ ಆಶ್ಚರ್ಯವಾಯಿತು. "ನಾನೂ ಏನನ್ನು ಕೇಳಿಲ್ಲ ಆದರೂ ಪುನಃ ಪುನಃ ಪ್ರಸಾದ ಲಭಿಸುತ್ತಿದೆ. ಏನಿರಬಹುದು..." ಎಂದು ಯೋಚಿಸುತ್ತಾ ರಾತ್ರಿ ಮಲಗಿದಾಗ ಉಷಃ ಕಾಲದಲ್ಲಿ ಸ್ವಪ್ನ ದರ್ಶನವಾಗಿ " ಅತಿ ಶೀಘ್ರದಲ್ಲಿಯೇ ನೀವು ನಿಮ್ಮ ಶಿಷ್ಯರನ್ನು ನೋಡಿಕೊಳ್ಳಿ ನೀವು ವೃಂದಾವನಸ್ಥರಾಗುವ ಸಮಯ ಹತ್ತಿರವಾಗುತ್ತಿದೆ. " ಎಂದು ಶ್ರೀಹರಿಯ ಆದೇಶವಾಯಿತು. ಈ ಸಂದರ್ಭದಲ್ಲಿ ಶ್ರೀಪಾದಂಗಳವರ ಕಣ್ಣಿಗೆ ಪ್ರಕಾಂಡ ಪಂಡಿತರು, ವಿದ್ವಾಂಸರೂ, ಸದಾಚಾರ ಸಂಪನ್ನರೂ ಆದ ಹನುಮಂತಾಚಾರ್ಯರು ಕಂಡರು. ಇವರೇ ಮುಂದಿನ ಪೀಠಾಧಿಕಾರಿಯಾಗಲು ಯೋಗ್ಯರೆಂದು ತೀರ್ಮಾನಿಸಿ ಹುಣಸಿಹೊಳೆಯಲ್ಲಿ ಶಾ.ಶ. 1788 [ಕ್ರಿ.ಶ.1866] ಅಕ್ಷಯನಾಮ ಸಂವತ್ಸರ ಫಾಲ್ಗುಣ ಕೃಷ್ಣಪಕ್ಷ ಷಷ್ಟಿ ದಿನದಂದು 'ವಿದ್ಯಾಸಂಪೂರ್ಣತೀರ್ಥ' ಎಂಬ ಸುನಾಮವನಿತ್ತು ತಾವು ಬಿಳೆಭಾವಿಯಲ್ಲಿ ವೃಂದಾವನಸ್ಥರಾದರು.

ಶ್ರೀಶ್ರೀವಿದ್ಯಾಸಂಪೂರ್ಣತೀರ್ಥ ಶ್ರೀಪಾದರನ್ನು ಮಠದ ಶಿಷ್ಯರು ಆದರದಿಂದ ಸ್ವಾಗತಿಸಿ ಭಕ್ತಿಯಿಂದ ನಡೆದುಕೊಳ್ಳತೊಡಗಿದರು. ಸುರಪುರದ ದೊರೆ ರಾಜಾ ಇಮ್ಮಡಿ ಕೃಷ್ಣಪ್ಪನಾಯಕರು ಬಹು ಗೌರವದಿಂದ ರಾಜಮರ್ಯಾದೆಯೊಂದಿಗೆ ಗುರುಗಳ ಪುರಪ್ರವೇಶ ಮಾಡಿಸಿ ಪಾದಪೂಜೆ

ಮಾಡಿಸಿದರು. ಶ್ರೀಪಾದಂಗಳವರ ಪೂರ್ವಾಶ್ರಮದಲ್ಲಿ ತಮ್ಮಂದಿರಾಗಿದ್ದ ತಿಮಣಾಚಾರ್ಯರು ತಾವೂ ತಮ್ಮ ಪಾಂಡಿತ್ಯವನ್ನು ಕಣ್ವ ಸಮಾಜದ ಸೇವೆಯಲ್ಲಿಯೇ ಉಪಯೋಗಿಸಬೇಕೆಂದು ತೀರ್ಮಾನಿಸಿ ಗುರುಗಳ ಬಳಿ ತಮ್ಮ ಇಚ್ಛೆಯನ್ನು ಹೇಳಿಕೊಂಡರು. ಶ್ರೀಗಳವರು ಪರಮ ಸಂತೋಷಪಟ್ಟು ಲೌಕಿಕ ರೀತಿಯ ಮಠದ ಭಾರವನ್ನು ತಿಮಣಾಚಾರ್ಯರಿಗೆ ಒಪ್ಪಸಿದರು. ಇದರಿಂದ ಮಠದ ಏಳಿಗೆಗೆ ತ್ವರಿತ ಗತಿಯಲ್ಲಿ ಸಾಗಿತು. ಕಣ್ವಮಠ ದಿಗ್ವಿಜಯ ಯಾತ್ರೆ ಮುಂಬಯಿ, ಸೊಲ್ಲಾಪುರ, ಪಂಢರಪುರ ಮುಂತಾದ ಊರುಗಳಲ್ಲಿ ನಡೆಯಿತು. ಶಿಷ್ಯವೃಂದ ಪರಮಭಕ್ತಿ ಹಾಗೂ ವೈಭವದಿಂದ ಶ್ರೀಗಳನ್ನು ಸ್ವಾಗತಿಸಿ ತಮ್ಮ ಸೇವೆಸೂತ್ರಗಳನ್ನು ಸಮರ್ಪಿಸಿದರು. ಸದ್ವೈಷ್ಣವಧರ್ಮದ ರಹಸ್ಯವನ್ನು ಶಿಷ್ಯ ಸಮೂಹಕ್ಕೆ ಬೋಧಿಸುತ್ತ ಗುರುಗಳು ದಕ್ಷಿಣದಿಕ್ಕಿಗೆ ಯಾತ್ರೆಯನ್ನು ಕೈಗೊಂಡರು. ಧಾರವಾಡ, ಹಾವೇರಿ ಮುಂತಾದ ಊರುಗಳ ಶಿಷ್ಯರನ್ನು ಅನುಗ್ರಹಿಸುತ್ತ ಹಾವೇರಿ ಜಿಲ್ಲೆ ಅಗಡಿ ಗ್ರಾಮಕ್ಕೆ ಆಗಮಿಸಿದರು. ಅಗಡಿಯ ಶ್ರೀಹಣಮಂತಗೌಡ ಬಹಾದ್ದೂರ ದೇಸಾಯಿ ಅವರು ಸಕಲ ಬ್ರಹ್ಮವೃಂದದಿಂದ ಕೂಡಿಕೊಂಡು ರಾಜವೈಭವದಿಂದ ಶ್ರೀಗಳವರನ್ನು ಬರಮಾಡಿಕೊಂಡು ತಮ್ಮ ವಾಡೆಯಲ್ಲಿಯೇ ಶ್ರೀಗಳ ಪೂಜೆ ಭಿಕ್ಷೆಗಳಿಗೆ ಏರ್ಪಾಡು ಮಾಡಿದರು. ಕೆಲವು ತಿಂಗಳು ಅಲ್ಲೇ ವಾಸ್ತವ್ಯ ಗೈದು ಹಾನಗಲ್ಲಿನತ್ತ ಪ್ರಯಾಣ ಬೆಳೆಸಿದರು.

ಹಾನಗಲ್ಲಿನಲ್ಲಿ ಶ್ರೀಭೀಮರಾವ್ ಗೋಪಾಲರಾವ್ ದೇಸಾಯಿ ಅವರ ಆತಿಥ್ಯ ಸ್ವೀಕರಿಸಿ ಮುಂದೆ ಆನವಟ್ಟಿಯನ್ನು ಪ್ರವೇಶ ಮಾಡುತ್ತಿದ್ದಂತೆ "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಗಾದಿಯಂತೆ ಕಣ್ವಮಠದ ಈ ಸಕಲ ಬಿರುದಾವಳಿ ಸಮೇತವಾದ ವೈಭವ ಹಾಗೂ ಶ್ರೀಗಳ ವರ್ಚಸನ್ನು ಕಂಡು ಕೆಲವು ವಿಘ್ನಸಂತೋಷಿಗಳು ಶ್ರೀಗಳ ಸಂಚಾರಕ್ಕೆ ವಿರೋಧವನ್ನುಂಟು ಮಾಡಿದರು. ಆಗ ಕಣ್ವ ಸಂಸ್ಥಾನದ ಮುಕ್ಕಾಮನ್ನು ಸ್ವಶಾಖಾಭಿಮಾನಿಗಳಾದ ಅಗಡಿಯ ಶ್ರೀಹನುಮಂತಗೌಡರೇ ತಮ್ಮ ರಾಜಧಾನಿಯಂತಿದ್ದ ಅಗಡಿ ಗ್ರಾಮದಲ್ಲಿ ಹಾಕಿಸಿದರು. ಕಣ್ವಮಠ ಸೂರ್ಯನಿಗೆ ಆಚ್ಛಾದಿತವಾದ ಈ ಮೇಘ ಪಟಲಗಳು ಸರಿದು ಹೋಗುವವರೆಗೆ ಮಠದ ಆರಭಾರವನ್ನು ಹಿಡಿದರು. ಶ್ರೀಪಾದಂಗಳವರು ಈ ವಿಘ್ನಕ್ಕೆ ಅಂಜಲಿಲ್ಲ. ಭಕ್ತರಲ್ಲಿ ಧೈರ್ಯ ತುಂಬಿದರು. ಮಠದ ದಿವಾನರು ಕಣ್ವಮಠಕ್ಕೆ ಬಂದ ವಿಘ್ನ ದೂರವಾಗುವಂತೆ ಮುಂಬಯಿ ಸರಕಾರದಲ್ಲಿ ಪ್ರಯತ್ನಪಟ್ಟು ಪರಂಪರಾಗತವಾಗಿ ತಮ್ಮ ಮಠಕ್ಕೆ ನಡೆದು ಬಂದ ಬಿರುದಾವಳಿ ಹಾಗೂ ಮಾನ ಮರ್ಯಾದೆಗಳ ದಾಖಲೆಗಳನ್ನು ತೋರಿಸಿ 'ಯಥಾಯೋಗ್ಯವಾದ ಕೆಲಸ ನಡೆಸಲು ಎಲ್ಲಿಯೂ ಏನೂ ಕೊರತೆಯಾಗದಂತೆ ಕಣ್ವಮಠದ ಸ್ವಾಮಿಗಳವರು ಮೆರೆಯಬಹುದು' ಎಂಬ ಹುಕುಮನ್ನು ಹೊರಡಿಸಿದರು. ಇದರಂತೆ ಮೈಸೂರು ಸರಕಾರದಿಂದಲೂ ಆಜ್ಞೆಯನ್ನು ತಂದು ವಿಘ್ನಸಂತೋಷಿಗಳ ವಿಘ್ನಗಳನ್ನು ನಾಶಮಾಡಿ ಮಠದ ಸಂಚಾರವನ್ನು ವಿಜೃಂಭಣೆಯಿಂದ ಸಾಗಿಸಿದರು. ಇಷ್ಟೆಲ್ಲ ಕಾರ್ಯಗಳು ನಡೆದು ಕಣ್ವಮಠಕ್ಕೆ ಜಯಸಂಪಾದಿಸಲು ಸುಮಾರು ಎರಡು ವರ್ಷಗಳು ಹಿಡಿದವು. ಇಷ್ಟು ದಿವಸಗಳ ವರೆಗೆ ಕಣ್ವಮಠದ ಪೋಷಣೆಯನ್ನು ಅಗಡಿಯ ಹಣಮಂತಗೌಡರೇ ತನುಮನಧನಗಳಿಂದ ಮಾಡಿದರೆಂದು ಪ್ರಸಿದ್ಧವಿದೆ.

ಅಗಡಿಯಲ್ಲಿರುವಾಗಲೇ ಶ್ರೀಪಾದಂಗಳವರ ಆರೋಗ್ಯ ಹದಗೆಟ್ಟಿತು. ಮುಂದೆ ಸಂಚಾರ ಬೆಳೆಸಲು ಆಗಲಿಲ್ಲ. ತಡೆದು ನಿಂತಿದ್ದ ಆನವಟ್ಟಿಯ ಸಂಚಾರವನ್ನು ತೀರಿಸಿಕೊಂಡು ವಿಶ್ರಾಂತಿ ಪಡೆಯಲು ಮಠದ ಮೂಲ ಸ್ಥಾನವಾದ ವೀರಘಟ್ಟಕ್ಕೆ ತೆರಳಿದರು. ಕೆಲವು ದಿನ ವಿಶ್ರಾಂತಿ ಪಡೆದಮೇಲೆ ಶಿಷ್ಯರ ಆಗ್ರಹದ ಮೇರೆಗೆ ಸಿಂಧನೂರು ತಾಲೂಕಿನ ಗೊರಲೂಟಿ ಗ್ರಾಮಕ್ಕೆ ಆಗಮಿಸಿದರು. ಅಲ್ಲಿ ಅವರ ಆರೋಗ್ಯ ಪೂರ್ತಿ ಹದಗೆಡಲು ವಿದ್ವಾಂಸ ಶೀಖಾಮಣಿಗಳಾದ ಮಾನವಿ ತಾಲೂಕಿನ ಕವಿತಾಳದ ಶ್ರೀನಿವಾಸಾಚಾರ್ಯರಿಗೆ ಸನ್ಯಾಸ ದೀಕ್ಷೆಕೊಟ್ಟು 'ಶ್ರೀವಿದ್ಯಾಧಿರಾಜ' ರೆಂಬ ಸುನಾಮವನಿತ್ತು ಮಠದ ಜವಾಬ್ದಾರಿಯನ್ನು ಹಸ್ತಾಂತರಿಸಿದರು. ಶಾ.ಶ.1810 [ಕ್ರಿ.ಶ. 1888] ಸರ್ವಧಾರಿನಾಮ ಸಂವತ್ಸರ ಭಾದ್ರಪದ ಶುಕ್ಲ ಏಕಾದಶಿ ದಿನ ಗೊರಲೋಟಿಯಲ್ಲಿ ವೃಂದಾವನಸ್ಥರಾದರು. ಶ್ರೀವಿದ್ಯಾಸಂಪೂರ್ಣತೀರ್ಥರು "ರತ್ನಪಂಚಕ" ಎಂಬ ವಿದ್ವತ್ಪೂರ್ಣ ಗ್ರಂಥವನ್ನು ರಚಿಸಿ ಕಣ್ವಶಾಖೆಯರಿಗೆ ಮಹದುಪಕಾರ ಮಾಡಿದ್ದಾರೆ. ಇದರಲ್ಲಿ ಶ್ರೀಮಾಧವತೀರ್ಥರಾದಿಯಾಗಿ ಗುರುಪರಂಪರಾಗತ ಕಾಲನಿರ್ಣಯ ಪೂರ್ವಕ ಸ್ತೋತ್ರವೂ ಇದೆ. ನಮ್ಮ ಕಣ್ವ ಮಠಕ್ಕೆ ಏಕಾದಶಿ ನಿರ್ಣಯವನ್ನು 54 ಘಳಿಗೆ 50 ಘಳ ಇದ್ದಾಗ ನಮ್ಮ ಮಠದವರಿಗೆ ಏಕಾದಶಿ ಎಂದು ನಿರ್ಣಯಿಸಿದ್ದಾರೆ. ಇಂತಹ ಗುರುಗಳನ್ನು ಪಡೆದ ನಾವೇ ಧನ್ಯರು.

ಶ್ರೀವಿದ್ಯಾಸಂಪೂರ್ಣತೀರ್ಥರು 1888 ರಲ್ಲಿ ಗೊರಲೂಟಿಯಲ್ಲಿ ವೃಂದಾವನಸ್ಥರಾದರು. ಆಗಿನ ಸಮಯದಲ್ಲಿ ಆರಾಧನೆ ಮಾಡಬೇಕೆಂದರೆ ಬಹಳ ಕಷ್ಟ. ಆ ಸಮಯದಲ್ಲಿ ಗೊರಲೂಟಿ ಗ್ರಾಮದಲ್ಲಿ 25 ರಿಂದ 30 ಮನೆಗಳು ಮಾತ್ರ ಇದ್ದವು, ಎಂದು ಊರಿನ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಅಂಥಾ ಕಠಿಣವಾದ ಸಮಯದಲ್ಲಿ, ಶ್ರೀಹನುಮಂತಾಚಾರ ಸಿರುಗುಂಪಿ ಇವರೇ ಮೂಲ ಅರ್ಚಕರು, ಬಂದ ಭಕ್ತರಿಗೆ ಇವರೇ ತೀರ್ಥಪ್ರಸಾದದ ವ್ಯವಸ್ಥೆ ಮಾಡಬೇಕು. ಇವರು ತಮ್ಮ ಕೈಲಾದಷ್ಟು ಸೇವೆಯನ್ನು ಮಾಡುತ್ತಾ ಇರುವ ಸಂದರ್ಭದಲ್ಲಿ 1971 ರಲ್ಲಿ ಸಿಂಧನೂರಿನ ವೇ.ಮೂ.ಶ್ರೀ ಗೋವಿಂದಾಚಾರ್ ಮಠಾಧಿಕಾರಿಗಳು ಮತ್ತು ಗೆಳೆಯರು ಸೇರಿಕೊಂಡು ಗುರುಗಳ ಆರಾಧನೆಗೆ ಗೊರಲೂಟಿಗೆ ಹೋದಾಗ ಅಲ್ಲಿ ಅರ್ಚಕರು ಅನಾರೋಗ್ಯದಿಂದ ಬಳಲುತ್ತಿರುವುದನ್ನು ನೋಡಿ ಗೋವಿಂದಾಚಾರ್ ಮಠಾಧಿಕಾರ, ಕೊಪ್ರೇಶರಾವ್, ಜೂರಟಗಿ ಮುರಾರಿರಾವ್, ಚೆನ್ನಳ್ಳಿ ಮಾಣಿಕರಾವ್ ಇವರೆಲ್ಲರೂ ಸೇರಿಕೊಂಡು ಗುರುಗಳ ಆರಾಧನೆಯನ್ನು ಮಾಡಿದರು. ನಂತರ 1995 ರಿಂದ ಶ್ರೀಗೋವಿಂದಾಚಾರ್ ಅವರ ಪುತ್ರರಾದ ವೇ.ಮೂ.ಶ್ರೀ ನರಸಿಂಹಾಚಾರ್ ಮತ್ತು ಅವರ ಗೆಳೆಯರ ಬಳಗದವರು ಸೇರಿಕೊಂಡು ವೈಭವದಿಂದ ಆರಾಧನೆ ಮತ್ತು ಗೊರಲೂಟಿ ಕ್ಷೇತ್ರ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತ ಬಂದರು. ಮುರಳಿಧರರಾವ್ ಪ್ಯಾಟಿ, ಮಾಣಿಕರಾವ್ ಅಲಬನೂರು, ದೀಕ್ಷಿತರು, ತಾರಾಪುರ ವಾಸುದೇವರಾವ್, ಅಲಬನೂರು ರಾಘವೇಂದ್ರರಾವ್, ಬಳ್ಳಾರಿ ಸೀತಾರಾಮಾಚಾರ್, ಇನ್ನೂ ಅನೇಕ ಗಣ್ಯ ವ್ಯಕ್ತಿಗಳಿಂದ ಜೀರ್ಣೋದ್ಧಾರದ ಕೆಲಸಗಳು ಪ್ರಾರಂಭಗೊಂಡವು.

ಶ್ರೀಗಳು ವೃಂದಾವನಸ್ಥರಾದ ಮೇಲೆ ಅನೇಕ ಪವಾಡ ಸದೃಶ ಘಟನೆಗಳು ನಡೆದಿವೆ. ಕೆಲವನ್ನು ಮಾತ್ರ ಇಲ್ಲಿ ದಾಖಲಿಸಿದೆ. ಒಮ್ಮೆ ಗುರುಗಳ ಆರಾಧನೆಗೆಂದು

ಭಕ್ತ ಸಮೂಹ ಸೇರಿತ್ತು. ಆಗ ಪಕ್ಕದ ಊರಿನಿಂದ ಬಂದ ಭಕ್ತರೊಬ್ಬರು ಗುರುಗಳ ಸನ್ನಿಧಾನದಲ್ಲಿದ್ದ ಒಂದು ಕಾಡು ಕಲ್ಲನ್ನು ಕಂಡು "ಇದು ಕಟ್ಟಿಗೆ ಕಡಿಯುವ ಕೊಡಲಿ ಮಸಿಯುವುದಕ್ಕೆ ಈ ಕಲ್ಲು ಚೆನ್ನಾಗಿದೆ" ಎಂದುಕೊಂಡು ತೆಗೆದುಕೊಂಡು ಹೊರಟನು. ಆಗ ಊರಿನ ಜನರು "ಒಯ್ಯಬೇಡ ಗುರುಗಳ ಸನ್ನಿಧಾನದಲ್ಲಿ ಇರುವ ಯಾವ ವಸ್ತುಗಳನ್ನು ಯಾರೂ ಒಯ್ಯುವುದಿಲ್ಲ ನೀನೂ ಒಯ್ಯಬೇಡ' ಎಂದು ಬುದ್ಧಿ ಹೇಳಿದರೂ ಅವನು ಕೇಳದೆ ತೆಗೆದುಕೊಂಡು ಹೋದನು. ಹೋದ ಮರುದಿನದಿಂದಲೇ ಅವನಿಗೆ ಅನಾರೋಗ್ಯ ಕಾಡತೊಡಗಿತು. ಬಾಧೆ ಹೆಚ್ಚಾದಾಗ ಗುರುಗಳ ವೃಂದಾವನ ದರ್ಶನಮಾಡಿ ಪರಿಹಾರ ತೋರಬೇಕೆಂದು ಕೇಳಿಕೊಂಡನು. ಆದಿನ ರಾತ್ರಿ ಗುರುಗಳು ಕನಸಿನಲ್ಲಿ ಕಂಡು " ನೀನು ತೆಗೆದುಕೊಂಡು ಹೋಗಿರುವ ಕಲ್ಲನ್ನು ತಂದು ಹಾಕು ನಿನ್ನ ಆರೋಗ್ಯ ಸರಿಹೋಗುತ್ತದೆ" ಎಂದು ಹೇಳಿದರು. ಮರುದಿನವೇ ಆ ಕಲ್ಲಿನ ಜೊತೆ ಒಂದು ಬಂಡಿ ಕಲ್ಲನ್ನು ತಂದು ಗೊರಲೋಟಿ ಗ್ರಾಮಕ್ಕೆ ಹಾಕಿದನು.

ಶ್ರೀಮಠದ ಪರಂಪರೆಯಲ್ಲಿ ಹತ್ತನೇ ಯತಿಗಳಾದ ಶ್ರೀವಿದ್ಯಾತಪೋನಿಧಿತೀರ್ಥರು 1972 ರಲ್ಲಿ ಗೊರಲೂಟಿ ಗ್ರಾಮದಲ್ಲಿ ತಮ್ಮ ಐದನೇ ಚಾತುರ್ಮಾಸವನ್ನು ಆಚರಿಸಬೇಕೆಂದು ತೀರ್ಮಾನಿಸಿದರು. ಗೊರಲೂಟಿಯು ಅತ್ಯಂತ ಕುಗ್ರಾಮವಾದ್ದರಿಂದ ಭಕ್ತಾದಿಗಳು "ನೀವು ಇಲ್ಲಿ ಚಾತುರ್ಮಾಸ್ಯ ಕೂಡುವುದು ಬೇಡ ಇಲ್ಲಿ ಯಾವ ವಸ್ತುಗಳೂ ಸಿಗುವುದಿಲ್ಲ ಬಹಳ ಅನಾನುಕೂಲವಾಗುತ್ತದೆ" ಎಂದು ಪರಿಪರಿಯಾಗಿ ಕೇಳಿಕೊಂಡರು. ಆದರೆ ಗುರುಗಳು ಒಪ್ಪದೆ "ನನಗೆ ಶ್ರೀವಿದ್ಯಾಸಂಪೂರ್ಣತೀರ್ಥರ ಅಪ್ಪಣೆಯಾಗಿದೆ. ನಾನು ಇಲ್ಲಿಯೇ ನನ್ನ ಐದನೆಯ ಚಾತುರ್ಮಾಸ ಮಾಡುವುದು ನಿಶ್ಚಿತ. ಇಲ್ಲಿ ನನಗೆ ಯಾವ ಸೌಲಭ್ಯವೂ ಬೇಡ ಗುರುಗಳ ಸನ್ನಿಧಾನದಲ್ಲಿ ಇರುವ ಬೇವಿನಗಿಡದ ತಪ್ಪಲನ್ನೇ ತಿಂದು ಚಾತುರ್ಮಾಸವನ್ನು ಪೂರೈಸುತ್ತೇನೆ" ಎಂದಾಗ ಭಕ್ತರು ಅನಿವಾರ್ಯವಾಗಿ ಒಪ್ಪಿಕೊಂಡರು. ಹಾಗೇ ಚಾತುರ್ಮಾಸದ ಸಮಯದಲ್ಲಿ ಒಂದು ದಿನ ಮಧ್ಯರಾತ್ರಿ ಎರಡು ಘಂಟೆಯ ಸಮಯದಲ್ಲಿ ಶ್ರೀವಿದ್ಯಾತಪೋನಿಧಿತೀರ್ಥರು ಹಾಗೂ ಶ್ರೀವಿದ್ಯಾಸಂಪೂರ್ಣತೀರ್ಥರು ಏಕಾಂತವಾಗಿ ಮಾತನಾಡುವುದನ್ನು ವೇ.ಮೂ.ಮಾಧವಾಚಾರ್ ಸಾಲಗುಂದ ಅವರು ಕೇಳಿಸಿಕೊಂಡಾಗ ಶ್ರೀವಿದ್ಯಾತಪೋನಿಧಿತೀರ್ಥರು ಇಲ್ಲಿ ನಡೆದ ವಿಷಯವನ್ನು ಚಾತುರ್ಮಾಸ ಮುಗಿಯುವವರೆಗೆ ಎಲ್ಲಿಯೂ ಹೇಳಬಾರದೆಂದು ಅಪ್ಪಣೆ ಮಾಡಿದರು. ಚಾತುರ್ಮಾಸ ವೈಭವದಿಂದ ಸಂಪನ್ನವಾಯಿತು. ಸೀಮೋಲ್ಲಂಘನೆದಿನ ಭಕ್ತರನ್ನು ಉದ್ದೇಶಿಸಿ " ಈ ಚಾತುರ್ಮಾಸ ಇಷ್ಟು ವೈಭವದಿಂದ ನಡೆಯಲು ನನ್ನದೇನೂ ಇಲ್ಲ. ಇದಕ್ಕೆಲ್ಲ ಶ್ರೀವಿದ್ಯಾಸಂಪೂರ್ಣರ ಅನುಗ್ರಹ ಕಾರಣ" ಎಂದು ಹೇಳಿದರು. [ಮಠದ ಶಿಷ್ಯರಾದ ವೇ.ಮೂ.ಮಾಧವಾಚಾರ್ ಸಾಲಗುಂದಾ ಇದನ್ನು ಸ್ಮರಿಸಿಕೊಂಡು ಹೇಳಿರುವರು.]

ಗುರುಗಳ ವೃಂದಾವನವಿರುವ ಕಟ್ಟಡ 2014 ರಲ್ಲಿ ಜೀರ್ಣೋದ್ಧಾರಗೊಂಡಿದೆ. ಇಂದು ಭಕ್ತರಿಗೆ ಬೇಕಾಗುವ ಎಲ್ಲ ಮೂಲಭೂತ

ಸೌಕರ್ಯಗಳು ಶ್ರೀಮಠದಲ್ಲಿ ಲಭ್ಯವಿದೆ. ಪ್ರತಿನಿತ್ಯ ಪೂಜಾ, ಹಸ್ತೋದಕ ನಡೆಯುತ್ತದೆ. ಪಕ್ಷಮಾಸದಲ್ಲಿ ಹದಿನೈದುದಿನ ಭಕ್ತರ ಅನುಕೂಲಕ್ಕಾಗಿ ಪಿತೃಕಾರ್ಯಗಳು ನಡೆಯುತ್ತವೆ. ಶ್ರೀಕ್ಷೇತ್ರ ಗೊರಲೂಟಿಯು ರಾಯಚೂರು ಜಿಲ್ಲೆಯಲ್ಲಿದ್ದು ಸಿಂಧನೂರಿನಿಂದ 33 ಕಿ.ಮೀ. ದೂರದಲ್ಲಿದೆ. ವಾಹನಗಳ ಅನುಕೂಲವು ಇದೆ.

ಶ್ರೀಕೃಷ್ಣಾರ್ಪಣಮಸ್ತು.

ಲೇಖಕರು : **ಶ್ರೀಕೆಂಗಲ್ ವೆಂಕಟೇಶಾಚಾರ್ಯ,** ಸಿಂಧನೂರು

ಫೋ.ನಂ : 9449688565.

* * *